landless ಎಂದು ದರಖಾಸ್ತು ಹಾಕಿದರು, ಪೊನ್ನೆ ಅವರಿಗೆ ನರ್ಸರಿಗಾಗಿ 30 ಎಕರೆ ಭೂಮಿ ಕೊಟ್ಟಿದ್ದಾರೆ. ಆದರೆ ಭೂಮಿ ಇಲ್ಲದಿರುವವರಿಗೆ ಕೊಟ್ಟಿಲ್ಲ.

ಶ್ರೀ ಎಂ. ಪಿ. ಕೃಷ್ಣಪ್ಪ.—ಅವರ ಹೆಸರನ್ನು ಕೊಡಿ, ವಿಚಾರ ಮಾಡುತ್ತೇನೆ, ಕಾನೂನಿನ ಪ್ರಕಾರ ಭೂಹೀನರಿಗೆ ಕೊಡಬೇಕು. ಒಂದೊಂದು ವೇಳೆ ಭೂಮಿ ಇರುವವರಿಗೂ ಕೊಡುತ್ತಾರೆ. ಗೇರುಬೀಜದ ವ್ಯವಸಾಯ ಮತ್ತು ಕಾಫಿ ಪ್ಲಾಂಟೇಷನ್‌ಗೆ ಕೊಡುತ್ತಾರೆ.

ಶ್ರೀ ಎ. ಕೃಷ್ಣಶೆಟ್ಟಿ.—ಇಲ್ಲಿ ಭೂಮಿಯಿಲ್ಲದ ರೈತರಿಗೆ ಕೊಟ್ಟಿರುವ ಜಮೀನನ್ನು ಕೊಟ್ಟಿದ್ದೀರಿ; ಇದರಲ್ಲಿ ಗೇರುಬೀಜಕ್ಕೆ (Cashewnut) ಕೊಟ್ಟಿದ್ದೂ ಸೇರಿದೆಯೇ?

ಶ್ರೀ ಎಂ. ಪಿ. ಕೃಷ್ಣಪ್ಪ.—ಇಲ್ಲ ಭೂಮಿಯಿಲ್ಲದ ಜನರಿಗೆ ಕೊಟ್ಟಿದ್ದನ್ನು ಕೇಳಿದೆ ಅದನ್ನ ಕೊಟ್ಟಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು ಕೊಟ್ಟಿರುವ ಜಮೀನಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಅಲ್ಲದೆ ಬೇರೆಯವರಿಗೆ ಕೊಟ್ಟಿರುವುದೂ ಇದೆಯಲ್ಲವೆ?

ಶ್ರೀ ಎಂ. ಪಿ. ಕೃಷ್ಣಪ್ಪ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೆಯಾಳಿಗಳು ಬಂದು ವಲಸೆ ಮಾಡಿಕೊಂಡಿದ್ದಾರೆಂದು ಗೊತ್ತಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಭೂಮಿಯಿಲ್ಲದ ರೈತರು ದರಖಾಸ್ತು ಅರ್ಜಿ ಹಾಕಿದರೆ, ದಕ್ಷಿಣ ಕನ್ನಡ ಜಿಲ್ಲೆಯವರಾಗಿ ಮನೆ ಕಟ್ಟಿಕೊಂಡು ವಸತಿ ಸ್ಥಿರ್ಯ ಮಾಡಿಕೊಂಡಿದ್ದವರನ್ನು ಹೊರಗೆಹಾಕಿ ಬೇರೆ ಪ್ರದೇಶದಿಂದ ಬಂದವರನ್ನು ಹೊರಗೆ ಹಾಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಪಿ. ಕೃಷ್ಣಪ್ಪ.—ಅಂಥ ಯಾವುದಾದರೂ ಕೇಸುಗಳಿದ್ದರೆ ನಮ್ಮ ಗಮನಕ್ಕೆ ಬಂದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭೂಮಿಯಿಲ್ಲದಿರುವವರಿಗೆ ಭೂಮಿ ಕೊಟ್ಟು ಉದ್ಯೋಗ ಕಲ್ಪಿಸಿಕೊಡುವುದು ಬಿಟ್ಟು ಬಹುಭಾಗ ಜಮೀನು ಹೊಂದಿಕೊಂಡಿರುವವರಿಗೇ, ಯಾವ ಮನುಷ್ಯ ಅಕ್ರಮವಾಗಿ ಭೂಮಿ ಸಾಗುವಳಿ ಮಾಡಿಕೊಂಡು T.T. ಕೊಡುತ್ತಿದ್ದರೋ ಅವರಿಗೇ ಕೊಡುತ್ತೀರಿ. ಅಂಥವರನ್ನು ಬಿಡಿಸಿ ಭೂಮಿಯಿಲ್ಲದಿರುವವರಿಗೆ ಕೊಡುತ್ತೀರಾ?

ಶ್ರೀ ಎಂ. ಪಿ. ಕೃಷ್ಣಪ್ಪ—ರೂಲ್ಸ್‌ಪ್ರಕಾರ ಭೂಮಿಯಿಲ್ಲದ ಹರಿಜನರಿಗೆ first priority ಇರುತ್ತದೆ. ಎರಡನೆಯ priorityಅಲ್ಲಿ ಎಕ್ಸ್‌ಪ್ರಿಯೋಚಿಡ್ ಮತ್ತು ಜಮೀನ ಮುಳುಗಡೆಯಿಂದಾಗಿ ಬಂದ ಜನರಿಗೆ ಕೊಡುತ್ತೇವೆ, ಇವರಿಗಾದಮೇಲೆ ಪೊಲಿಟಿಕಲ್ ಸಫರರ್‌ಗಳಿಗೆ ಆಮೇಲೆ ಸಿಪಾಯಿಗಳಿಗೆ ಕೊಡುತ್ತಾರೆ. ಈ ರೀತಿಯಾಗಿ ಎಲ್ಲವನ್ನೂ ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಕೊಟ್ಟಿರುವ Priorities ಪ್ರಕಾರ ಮಾಡಿದೆ.

Sri J. P. SARWESH.—There are a number of applications from the landless labourers. Will the Government consider reducing the grazing land reserved in each village and give half of the existing land to the landless labourers who form themselves into co-operative societies?

Sri M.V. KRISHNAPPA.—According to the existing rules, one acre of gomal has to be reserved for 3 cattle existing in each village. If there is sufficient gomal for the existing cattle in a village, Government in certain deserving cases do grant lands to such people. Either the Tahsildar or the S. D. O. or the D.C. has no power to grant land but Government has got the power.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಾನು ಕೇಳಿದ್ದು, ಭೂಮಿ ಹೊಂದಿರುವವರಿಗೇ ಯಾರು ಸರ್ಕಾರಿ ಜಮೀನನ್ನು ಅಕ್ರಮವಾಗಿ ಮಾಡುತ್ತಿದ್ದಾರೋ ಅವರಿಗೇ ಜಮೀನನ್ನ ಕೊಟ್ಟಿದ್ದರಲ್ಲವೇ ಎಂದು.

ಶ್ರೀ ಎಂ. ಪಿ. ಕೃಷ್ಣಪ್ಪ.—ಈ ಬೆಳಗ್ಗೆ ಇಂಥಾದ್ದೇ ಒಂದು ಪ್ರಶ್ನೆ ಬಂದಿತ್ತು. ಕೆಲವು ರೈತರು ಬಗರ್ ಹುಕ್ಕುಂ ಸಾಗುವಳಿ ಮಾಡಿ T.T. ಕೊಡುತ್ತಾ ಬರುತ್ತಿರುತ್ತಾರೆ. ಹತ್ತಿಪ್ಪತ್ತು ವರುಷಗಳಿಂದ ಹೀಗೆಯೇ ಉತ್ತುಕೊಂಡು ಹಳ್ಳ ಕೊಳ್ಳ ಸರಿಮಾಡಿಕೊಂಡಿರುತ್ತಾನೆ. ಹೀಗಿರುವಲ್ಲಿ ಅವರಿಗೆ ಕೊಡಬೇಕೇ ಬೇರೆಯವರಿಗೆ ಕೊಡಬೇಕೇ ಎಂಬ ಪ್ರಶ್ನೆ ಬರುತ್ತದೆ. ಜಮೀನಿಲ್ಲದ ಜನರು ಹೆಚ್ಚಿಗೆ ಇದ್ದರೆ ಅವರಿಗೆ ಕೊಚ್ಚೇ ಕೊಡುತ್ತೇವೆ. ಹಾಗೆ ಇಲ್ಲದ ಸಂದರ್ಭಗಳಲ್ಲಿ ಮೊದಲಿಂದ ಸಾಗುವಳಿ ಮಾಡುತ್ತಿದ್ದವರಿಗೆ ಕೊಡಬೇಕೇ ಬೇರೆಯವರಿಗೆ ಕೊಡಬೇಕೇ. ಅವರಿಗೇ ಕೊಡುವುದು ಧರ್ಮ.

Mr. SPEAKER.—Is it a hypothetical question? Are you aware of any case in South Kanara because the question relates only to South Kanara?

ಶ್ರೀ ಗೋಪಾಲ ಸಾರೆನ್ನ.—ಈ ಜಮೀನು ಕೊಡುವುದು ಪ್ರಥಮತಃ ಹರಿಜನರಿಗೆ ಎಂದು ಹೇಳಿದ್ದೀರಿ. ಈಗ ಹೆಚ್ಚಿಗೆ reject ಆಗಿರುವ ಅರ್ಜಿಗಳ ಪೈಕಿ ಹೆಚ್ಚಿನ ಅರ್ಜಿದಾರರು ಹರಿಜನರೇ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಪಿ. ಕೃಷ್ಣಪ್ಪ.—ಹೌದು. ಹರಿಜನರೇ ಹೆಚ್ಚಿಗೆ ಅರ್ಜಿಗಳನ್ನು ಹಾಕುತ್ತಾರೆ. ಆದ್ದರಿಂದ reject ಆಗುವುದು ಅವರದೋ ಜಾಸ್ತಿ.

ಶ್ರೀ ಗೋಪಾಲ ಸಾರೆನ್ನ.—ಈ ಅರ್ಜಿದಾರರುಗಳು ಯಾವ ಸ್ಥಳಕ್ಕೆ ಹಾಕಿದ್ದರೋ ಆ ಸ್ಥಳವನ್ನೇ ಇತರರಿಗೆ ಕೊಟ್ಟಿರುವ ನಿದರ್ಶನಗಳು ಎಷ್ಟೋ ಇವೆ. ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಪಿ. ಕೃಷ್ಣಪ್ಪ.—ಅಂಥಾದ್ದನ್ನು ತಾವು ನಮ್ಮ ಗಮನಕ್ಕೆ ತಂದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಕೃಷ್ಣಶೆಟ್ಟಿ.—ಬೆಳ್ತಂಗಡಿ, ಪುತ್ತೂರು ಮತ್ತು ಕಾರ್ಕಳ ಇವುಗಳಲ್ಲಿನ ಭೂ-ರೈತರಿಗೆ ದರಖಾಸ್ತು ಕೊಡುವಾಗ ಕಾಡು ಉತ್ಪನ್ನವನ್ನು ಮಾರಿದ್ದರಿಂದ ಸರ್ಕಾರದವರಿಗೆ ಎಷ್ಟು ಉತ್ಪತ್ತಿ ಬಂದಿದೆ?

ಶ್ರೀ ಎಂ. ಪಿ. ಕೃಷ್ಣಪ್ಪ.— ಮಾಲ್ಕಿ ಎಂದು ಜಮೀನು ಕೊಡುವಾಗ ಅದರಲ್ಲಿ ಎಷ್ಟು ಮರಗಳಿವೆಯೋ ಅದನ್ನು ನೋಡಿ ಹಣವನ್ನು ವಸೂಲು ಮಾಡುತ್ತಾರೆ. ತಮಗೆ ಬೇಕಾದರೆ ಆ ಮೂರು ತಾಲ್ಲೂಕಿನ ಅಂಕಿಗಳನ್ನು ತರಿಸಿಕೊಡುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಉಡುಪಿ ತಾಲ್ಲೂಕಿನಲ್ಲಿ ಈ ತನಕ ಕೊಟ್ಟಿರುವ ಭೂಮಿ ಎಷ್ಟು?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟು ಅರ್ಜಿಗಳು ಬಂದುವು, ಎಷ್ಟು ರಿಜೆಕ್ಟ್ ಆಯಿತೆಂಬುದನ್ನು ಹೇಳಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವುದೇ 16,000 ಎಕರೆ. ಅದಕ್ಕೆ 31,000 ಅರ್ಜಿ ಬಂದಿತ್ತು 18,000, ರಿಜೆಕ್ಟ್ ಆಯಿತು. ಎಷ್ಟು ಭೂಮಿ ಕೊಟ್ಟಿದೆಯೆಂಬುದು ಬೇಕಾದರೆ ತರಿಸಿಕೊಡುತ್ತೇನೆ.

Sri C. J. MUCKANNAPPA.—Suppose people have cultivated land unauthorisedly in South Kanara. Will Government take away such lands from the unauthorised cultivators and give them to the landless labourers?

ಶ್ರೀ ಎಂ. ವಿ. ಕೃಷ್ಣಪ .—Unauthorised ಆಗಿ ಮಾಡಿದ್ದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ Hard and fast rule ಮಾಡುವುದಕ್ಕಾಗುವುದಿಲ್ಲ. Unauthorised cultivation ಎಂದರೆ 4-5 ರೀತಿ ಇರುತ್ತದೆ. ಒಬ್ಬ ರೈತನಿಗೆ ಎರಡು ಎಕರೆ ಕೊಡಲ್ಪಟ್ಟಿರುತ್ತದೆ. ಆತ ಗೊತ್ತಾಗಿಯೋ ಗೊತ್ತಿಲ್ಲದೆಯೋ 3 ಎಕರೆ ತೆಗೆದು ಕೊಂಡು 20 ವರ್ಷದಿಂದ ಸಾಗುವಳಿ ಮಾಡುತ್ತಾ ಇರುತ್ತಾನೆ. ಹೆಚ್ಚಿಗೆ ಇರುವ ಒಂದು ಎಕರೆಗೆ T. T. ಕೊಡುತ್ತಿರುತ್ತಾನೆ. ಅವನು ಅಲ್ಲಿನ ಹಳ್ಳಕೊಳ್ಳ ಎಲ್ಲಾ ಸರಿಮಾಡಿಸಿಕೊಂಡು ಅಷ್ಟು ವರ್ಷದಿಂದ ಸಾಗುವಳಿ ಮಾಡುತ್ತಿದ್ದುದನ್ನು ಕಿತ್ತುಕೊಳ್ಳುವುದರಲ್ಲಿ ಏನುಧರ್ಮವಿದೆ? ಒಂದು ವೇಳೆ ಇನ್ಯಾವನಾದರೂ ಜಮೀನಿಲ್ಲದವನಿದ್ದರೆ ಅವನಿಗೆ ಕಿತ್ತುಕೊಂಡು ಕೊಡುವುದು ಒಂದು ಧರ್ಮ. ಆದ್ದರಿಂದ ಭೂಮಿ ಹಂಚುವುದರಲ್ಲಿ Hard and fast rule ಇರುವುದಕ್ಕಾಗುವುದಿಲ್ಲ. ಸ್ಥಳ ಪರಿಸ್ಥಿತಿ ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯಸಮಸ್ಯೆಯೇನೆಂದರೆ ಅಲ್ಲಿ ಹೆಚ್ಚಿಗೆ ಜಮೀನಿಲ್ಲದಿರುವುದು. ಆದ್ದರಿಂದಲೇ 'ಮೈಸೂರಿನ ಹೊರಗಿನಿಂದ ಬಂದಿರುವ ರೈತರ ವಿಷಯದಲ್ಲಿ ಏನು ಮಾಡುತ್ತೀರಿ' ಎಂದು ಕೃಷ್ಣಯ್ಯ ಶೆಟ್ಟರು ಕೇಳಿದ್ದು. ಈಗ ನೀವು ಮೈಸೂರಿನವರೇನಾದರೂ unauthorised cultivation ಮಾಡಿದ್ದರೆ ಅವರನ್ನು evict ಮಾಡುತ್ತೀರಿ. ಅದೇ, ಹೊರಗಿನಿಂದ ಬಂದವರಾಗಿದ್ದರೆ 'Extraneous Circumstances' ಎಂದು ಹೇಳಿ ಅವರ ಸ್ಥಾನವನ್ನೇ ಸರಿಮಾಡುತ್ತೀರಿ. ಈ ನೀತಿಗೆ ಯಾರು ಏನು ನಮಜಾಯಿಸಿ ಹೇಳುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ —ಗ್ರಾಮಸ್ಥರಲ್ಲಿ Landless agriculturists ಗೇ ಮೊಟ್ಟಮೊದಲು ಕೊಡಬೇಕೆಂದು ರೂಲ್ಸಿನಲ್ಲಿದೆ. ಅದು ಬಿಟ್ಟು ಬೇರೆ ರೀತಿ ಅಮಲ್ದಾರರು ಕೊಟ್ಟಿದ್ದರೆ ಸಬ್‌ಡಿವಿಜನ್ ಆಫೀಸರಲ್ಲಿ ಅಪೀಲ್ ಹೋಗುತ್ತಾರೆ. ಒಂದುವೇಳೆ ಡೆಪ್ಯುಟಿ ಕಮಿಷನರು ಮಾಡಿದ್ದರೆ ರೆವಿನ್ಯೂ ಅಪಿಲೇಟ್ ಟ್ರಿಬ್ಯುನಲ್ಲಿಗೆ ಕೂಡ ಅಪೀಲ್ ಹೋಗಬಹುದು. ಈ ರೀತಿ 2-3 ಹಂತದಲ್ಲಿ ಅಪೀಲ್ ಹಾಕುವುದಕ್ಕೆ chance ಇರುವುದರಿಂದ ತಾವು ಹೇಳಿದಂತೆ ಆಗುವುದಕ್ಕೆ chances ಇರುವುದಿಲ್ಲ. ತಾವು ಹೇಳಿದಂತೆ unauthorised ಆಗಿದ್ದರೆ ಅವರನ್ನು evict ಮಾಡುತ್ತಾರೆ.

Mr. SPEAKER.—He was a member of the previous Assembly. There are a large number of Malayalees who had come and settled down there. They were to be evicted. Ultimately, a Government Order was passed with regard to that. So, the information is available. In view of that, I do not know whether it should be elicited again. If you have got anything else in mind, you may put a supplementary.

ಶ್ರೀ ಬಿ. ಹುಚ್ಚೇಗೌಡ.— ನಿಖರವಾಗಿ ಇಷ್ಟೇ ಕೇಸುಗಳು ಇತ್ಯರ್ಥವಾಗದೆ ಉಳಿದಿವೆ ಎಂಬುದಾಗಿ ಈ ಸಭೆಗೆ ಒಂದು ಭರವಸೆಯನ್ನು ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಇಲ್ಲಿ ಭರವಸೆಕೊಡುವುದಕ್ಕೇನೋ ಸಾಧ್ಯವಿದೆ.

ಶ್ರೀ ಆರ್. ಕೆ. ದಯಾನಂದ್.—ಸ್ಥಳದವರು ಅರ್ಜಿ ಕೊಟ್ಟಿದ್ದರೂ ಅದಕ್ಕೆ ಬೆರೆ ಕೊಡದೆ ಹೊರಗಿನಿಂದ ಬಂದಿರುವವರೇನಾದರೂ ತಕರಾರುಮಾಡುತ್ತಾರೆಂದರೆ ಆಗ ಕೂಡಲೆ ಅವರ ಅರ್ಜಿ ಬಗ್ಗೆ ಕ್ರಮ ತೆಗೆದುಕೊಂಡು ಸ್ಥಳದವರ ಅರ್ಜಿಯನ್ನು ನಿರಾಕರಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಂತ್ ಕೆನರಾದವರ ಪ್ರಶ್ನೆಯಾದರೆ ಸ್ಥಳದವರಿಗೆ ಕೊಡಬೇಕು ಎಂದಿದೆ. If the local people have not been given as I told you they can go in appeal. If the Tahsildar has not given, he can go to the Deputy Commissioner. The Government have followed land grant rules. ಹೈಕೋರ್ಟಿನಲ್ಲಿ ರಿಟ್‌ಗಳನ್ನು ಹಾಕಿ ಅಲ್ಲಿಂದ ಆರ್ಡರ್ಸ್ ಆಗಿ ಎಷ್ಟೋ ಕೇಸುಗಳು ನಿಧಾನವಾಗಿ ಬರುತ್ತವೆ. So in various stages one can get justice in this country. There is no such room for irregularities to be followed.

ಶ್ರೀ ಗೋಪಾಲ ಸಾರೆನ್ನ.—ಕಳೆದ 3 ವರ್ಷಗಳಿಂದಲೂ 6319 ಅರ್ಜಿಗಳು ಇತ್ಯರ್ಥವಾಗದೆ ಬಾಕಿ ಇದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇನ್ನೆಷ್ಟು ಕಾಲ ಈ ಅರ್ಜಿಗಳು ತೀರ್ಮಾನವಾಗುವುದಕ್ಕೆ ಆಗಬಹುದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರತಿ ದಿವಸವೂ ಈ ರೀತಿ ಅರ್ಜಿಗಳು ಬರುತ್ತಲೇ ಇರುತ್ತವೆ. It is a running process. ಇದು ಭೂಮಿ ವಿಷಯ. ನನಗೆ ಒಂದು ದಿನಕ್ಕೆ 300 ಅರ್ಜಿಗಳು ಬರುತ್ತವೆ. ಸಾಂತ್ ಕೆನರಾಗೆ ಸಂಬಂಧಪಟ್ಟುದು ಸುಮಾರು 15-20 ಇದ್ದೇ ಇರುತ್ತವೆ. ನಾನು ಬೇರೆ ಮಂತ್ರಿಗಳಿಗೆ ಇವನ್ನು ದಿನವೂ ಕಳುಹಿಸುವುದು ಇದ್ದೇ ಇರುತ್ತದೆ. ಅಮಲ್ದಾರರಿಗೂ ಬೇರೆ ಕೊಡುತ್ತಾರೆ. ಹೀಗೆ ಸಾಂತ್ ಕೆನರಾ ಜಿಲ್ಲೆಗೆ ಸಂಬಂಧಪಟ್ಟ ಎಲ್ಲಾ ತರಹ ಅರ್ಜಿಗಳು ಅಂದರೆ ಸುಮಾರು ಒಂದು ಸಾವಿರ ಅರ್ಜಿಗಳು ಅವರಿಗೂ ನಮಗೂ ಬರುತ್ತಲೇ ಇರುತ್ತಹೆ. Every day they would be disposing of some petitions. ಒಟ್ಟಿನಲ್ಲಿ ಪೆಂಡಿಂಗ್ 5-6 ಸಾವಿರ ಅರ್ಜಿಗಳು ಇದ್ದೇ ಇರುತ್ತವೆ.

Sri G. V. GOWDA.—If the unthorised cultivators happen to be wealthy

persons and they own other lands, why don't you take steps to evict them ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾರೂ ಆ ಭಾಗದಲ್ಲಿ ಕೇಳಬೇ ಇದ್ದರೆ wealthy ಪಟೇಲರು ಜಮೀನು ಮಾಡುತ್ತಿರುತ್ತಾರೆ. ನನ್ನ ಗಮನಕ್ಕೆ ಅಂತಹ ಕೇಸುಗಳು ಕೆಲವು ಬಂದಿವೆ. ಆದರೆ ಅ೯ ಆತರ್ಮೈಡ್ಡ ಕಲ್ಪ ವೇಷನ್ನಿಗೆ ನಾವು ಅರೊ ಮಾಡಿದ್ದೇವೆಂಬುದಾಗಿ ದೂರು ಬಂದಿದ್ದೇ ಆದರೆ ಅಥವಾ ಎ೯ಕ್ರೋಜ್‌ಮೆಂಟ್ ಸ್ವಲ್ಪ ಏನಾದರೂ ಇದ್ದರೆ, ಅಯ್ಯೋ, ಪಾಪ, ಎಂದು ಅಂತಹವರಿಗೆ ಭೂಮಿಯನ್ನು ಕೊಡುತ್ತೇವೆ. ದರ ಖಾನ್ತು ಅರ್ಜಿಯನ್ನು ತಹಸೀಲ್‌ದಾರರಿಗೆ ಕೊಟ್ಟಾದ ಮೇಲೆ ಜಮೀನನ ್ನ ಉಳುಮೆಮಾಡುವವರಿಗೆ ಅರೊ ಮಾಡುತ್ತೇವೆ.

ಶ್ರೀ. ಎಸ್. ಎಂ. ಕೃಷ್ಣ.— ರೂಲ್ಸ್‌ಪ್ರಕಾರ ಅರೊ ಮಾಡಿದ್ದಾದರೆ ವೆಲ್ತ ಪಟೇಲರು, ಶ್ಯಾನುಬೋಗರು ಹೇಗೆ ಜಮೀನು ಮಾಡಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದೆರ್ಲಾ ಹಳ್ಳಿಗಳಲ್ಲಿ ನಡೆಯುವ ವಿಷಯ. ಇಂತಹ ಕೇಸುಗಳು ಅಮರ್ಲಾರರ ಗಮನಕ್ಕೆ ಬಂದ ತಕ್ಷಣ ರೂಲ್ಸ್ ಪ್ರಕಾರ ಅವನ್ನು ಅವರು ಕ್ಯಾನ್ಸಲ್ ಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಬಗ್ಗೆ ನೀವು ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

Sri M. V. KRISHNAPPA.—After all the country has to grow more food and there is no need to punish people ಇದು ದೇಶದಲ್ಲಿ ಹೆಚ್ಚಾಗಿ ಆಹಾರ ಬೆಳೆಯತಕ್ಕವರಿಗೆ ಅನ್ಯಾಯಿನುವುದಿಲ್ಲ. ಆದರೆ ಸರ್ಕಾರದ ಅಭಿಪ್ರಾಯದಲ್ಲಿ ಇವರ ಬಗ್ಗೆ ಏನಾದರೂ ರೋಪದೋಷಗಳೇನಾದರೂ ಕಂಡು ಬಂದರೆ, ಅಂತಹವರ ಮೇಲೆ ಟಿ. ಟಿ. ಹಾಕಿದಂಡ ವಸೂಲು ಮಾಡುವುದು ಉತ್ತಮವೆಂದು ನನಗೆ ತೋರುತ್ತದೆ.

Sri C. J. MUCKANNAPPA.—Shall I take it for granted that any man can go and occupy any land illegally and cultivate it for the purpose of making the grow more food campaign a success in the country ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಒಂದು ಪಾಲಿಸಿ ಎಂದು ಹೇಳುವುದಕ್ಕಾಗುವದಿಲ್ಲ. Certain amount of latitude has been given in certain cases ಎಂದು ಹೇಳಿದೆ. ಎಲ್ಲೋ ಕೆಲವರು ಅರ್ಜಿ ಕೊಡುತ್ತಾರೆ. ಮುಂಗಾರು ಮಳೆ ಬಂದ ತಕ್ಷಣ ಅವರಿಗೆ ಅವರ ಅರ್ಜಿ ಪ್ರಕಾರ ಭೂ ಸಾಗುವಳಿಗಾಗಿ ಜಮೀನು ಮಂಜೂರುಮಾಡಬೇಕು. ಒಂದು ವೇಳೆ ಆ ರೀತಿ ಮಂಜೂರು ಆಗದಿದ್ದರೆ ಅವರು ಮತ್ತೆ ಕಾಯಬೇಕು. ಅದುವರೆಗೇನಾದರೂ ಈ ಮಳೆ ಹೋದರೆ, ಒಂದು ವರ್ಷ ಅವರಿಗೆ ಅನ್ಯಾಯವಾಗಿ ಹೋಗುತ್ತದೆ. ಆ ಸಮಯಕ್ಕೆ ಸರಿಯಾಗಿ ಉಳದೇ ಇದ್ದರೆ ಬಡಪಾಯಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಿಳಿಯಬೇಕು. ಅಂತಹ ಕೇಸುಗಳು ಎಷ್ಟೋ ಇವೆ. ಅದೂ ಅಲ್ಲದೆ ಸರ್ಕಾರಿ ಗೋಮಾಳ ಜಮೀನು ಏನಾದರೂ ಇದ್ದರೆ ಆಗ ಅದನ್ನು ಲೀನಿಯಂಟಾಗಿ ನೋಡಬೇಕು ಎಂದು ಬೇರೆ ಹೇಳಿದೆ.

Constitution of State Beggars' Relief Committee.

*Q.—544. Smt. K. S. NAGARATHNAMMA (Gundlupet).—

Will the Government be pleased be state :—

(*a*) when the State Beggars' Relief Committee was constituted together with the names of Chairman and the members of the Committee ;

(*b*) the amount of expenditure incurred on this Committee for the last three years and the work turned out by the Committee ;

(*c*) whether there has been any such Committee in Mysore City since a long time ; and if so, the name of the person who was working as Chairman ;

(*d*) the additional expenditure incurred due to changing the Chairmanship of that Committee ?

A.—Sri R. M. PATIL (Minister for Home).—

(*a*) The Central Beggar Relief Committee was constituted on 30th August 1962. The names of the Chairman and the members of the Committee are mentioned in the statement appended hereto.

(*b*) 1.	1959-60	...	7-00
2.	1960-61	...	28-72
3.	1961-62	...	120-89

The work of the Committee is to supervise and control all matters relating to the administration of the Nirashrithara Parihara Kendra, Bangalore, and also matters relating to eradication of beggary in the State. The Committee is not an executive body by itself, but the Chairman of the Committee is an Executive Officer, who carries out the policy and measures approved by the Committee subject to the general orders of Government. The Commitee had, therefore, met several times during the last 3 years to review the activities of the institutions established under the Beggar Relief Act, to discuss policy matters and pass resolutions relating to the improvement of the institutions. The execution of the policy enunciated and the measures approved by the Committee from time